# ಭಾರತದಲ್ಲೂ ಸ್ಟಾರ್ ಲಿಂಕ್!

■ ಶಶಿಕುಮಾರ್ ಸಿ.

ಸ್ಪೇಸ್‌ಎಕ್ಸ್ ಹಾಗೂ ವಿದ್ಯುತ್ ಚಾಲಿತ ಅತ್ಯಾಧುನಿಕ ಟೆಸ್ಲಾ ಕಾರು ಬಿಡುಗಡೆ ಮಾಡುವ ಮೂಲಕ ವಿಶ್ವವೇ ತನ್ನತ್ತ ತಿರುಗುವಂತೆ ಮಾಡಿದ ಎಲಾನ್ ಮಸ್ಕ್, ಸದ್ಯ ವಿಶ್ವ ಟೆಕ್ ಪ್ರಪಂಚದ ಅನಭಿಷಕ್ತ ದೊರೆ. ಹೈಸ್ಪೀಡ್ 'ಸ್ಟಾರ್ ಲಿಂಕ್' ಅಂತರ್ಜಾಲ ಸೇವೆಯನ್ನು ಅಮೆರಿಕ ಸೇರಿದಂತೆ ಕೆಲ ದೇಶಗಳಲ್ಲಿ ಒದಗಿಸಿ ಇಂಟರ್ನೆಟ್ ಲೋಕದಲ್ಲಿ ಸಂಚಲನ ಸೃಷ್ಟಿಸಿರುವ ಅವರು ಈ ಸೇವೆಯನ್ನು ಭಾರತದಲ್ಲೂ ವಿಸ್ತರಿಸಲು ಮುಂದಾಗಿದ್ದಾರೆ.

ದೇಶದ ಟೆಲಿಕಾಂ ಕ್ಷೇತ್ರದಲ್ಲಿ ಈ ಹಿಂದೆ ಏರ್‌ಟೆಲ್‌ನದ್ದೇ ಪಾರುಪತ್ಯ. ಅಗ್ಗದ ಡಾಟಾ ಸೇವೆಯೊಂದಿಗೆ ಲಗ್ಗೆ ಇಟ್ಟ 'ಜಿಯೊ' ಏರ್‌ಟೆಲ್‌ನ



ಪಾರುಪತ್ಯ ಕುಗ್ಗಿಸಿ ಆ ಸ್ಥಾನದಲ್ಲಿ ತಾನು ಕೂತಿದೆ. ಈ ಕಂಪನಿಗಳು ಸೇರಿದಂತೆ ದೇಶದಲ್ಲಿ ಅಂತರ್ಜಾಲ ಸೇವೆಯನ್ನು ಒದಗಿಸುತ್ತಿರುವ ಎಲ್ಲ ಟೆಲಿಕಾಂ ಸಂಸ್ಥೆಗಳಿಗೂ 'ಸ್ಟಾರ್ ಲಿಂಕ್' ಎಂಟ್ರಿಯ ಸುದ್ದಿ ನಡುಕ ಹುಟ್ಟಿಸಿದೆ.

'ಟೆಕ್ನಾಲಜಿ ಬ್ಯುಸಿನೆಸ್ ಮ್ಯಾನ್' ಅಂತಲೂ ಕರೆಸಿಕೊಳ್ಳುವ ಎಲಾನ್ ಮಸ್ಕ್, 'ಸ್ಟಾರ್ ಲಿಂಕ್' ಇಂಟರ್ನೆಟ್ ಸೇವೆಗೆ ಅಗತ್ಯವಾದ ಉಪಗ್ರಹಗಳ ಗುಚ್ಛವನ್ನೇ 'ಸ್ಪೇಸ್‌ಎಕ್ಸ್' ಮೂಲಕ ನಭಕ್ಕೆ ಚಿಮ್ಮಿಸಿದವರು. ಆ ಉಪಗ್ರಹಗಳನ್ನೇ ಬಳಸಿಕೊಂಡು ಸದ್ಯ ಅಮೆರಿಕ ಸೇರಿದಂತೆ ಕೆಲವು ದೇಶಗಳಲ್ಲಿ ಹೈಸ್ಪೀಡ್ ಇಂಟರ್ನೆಟ್ ಸೇವೆಯನ್ನು ಒದಗಿಸುತ್ತಿದ್ದಾರೆ. 'ಸ್ಪೇಸ್‌ಎಕ್ಸ್' ಹಾರಿಸಿದ ಉಪಗ್ರಹಗಳ ಗುಚ್ಛದ ಮೂಲಕ ಕುಗ್ರಾಮ ಅಥವಾ ಕಾಡಿನಂತಹ ಪ್ರದೇಶದಲ್ಲೂ ಅತಿವೇಗದ ಇಂಟರ್ನೆಟ್ ಸೇವೆ ಒದಗಿಸುವ ಸಾಮರ್ಥ್ಯವನ್ನು 'ಸ್ಟಾರ್‌ಲಿಂಕ್' ಹೊಂದಿದೆ.

ಭಾರತದಲ್ಲಿ 'ಸ್ಟಾರ್‌ಲಿಂಕ್' ಆರಂಭಿಸುವ ಬಗ್ಗೆ ಎಲ್ಲಿಯೂ ತುಟಿ ಬಿಚ್ಚದ ಮಸ್ಕ್, ಟ್ವಿಟರ್ ಮೂಲಕ ಈ ಬಗ್ಗೆ ಸುಳಿವನ್ನು ಕೊಟ್ಟಿದ್ದಾರೆ. 'ಟ್ರೈಆನ್‌ಸೆಟ್' (Tryonset) ಹೆಸರಿನ ಟ್ವಿಟರ್ ಖಾತೆದಾರರು, 'ಡಿಯರ್ ಎಲಾನ್, ವೈರ್‌ಲೆಸ್ ಇಂಟರ್‌ನೆಟ್ ಸೇವೆಗಾಗಿ ನಾವು ಮತ್ತು ನಮ್ಮ ಅತ್ಯುತ್ಸಾಹಕ ಗ್ರಾಹಕರು ಕಾತುರದಿಂದ ಕಾಯುತ್ತಿದ್ದೇವೆ. ಭಾರತದಲ್ಲಿ ಸ್ಟಾರ್ ಲಿಂಕ್ ಸೇವೆಯನ್ನು ಯಾವಾಗ ಪ್ರಾರಂಭಿಸುತ್ತೀರಿ?' ಎಂದು ಪ್ರಶ್ನಿಸಿದ್ದರು. ಅದಕ್ಕೆ ಪ್ರತಿಕ್ರಿಯಿಸಿರುವ ಅವರು, 'ಅನುಮತಿ ಪ್ರಕ್ರಿಯೆ, ನಿಯಮಗಳ ಬಗ್ಗೆ ಪರಿಶೀಲಿಸುತ್ತಿದ್ದೇವೆ' ಎಂದಿದ್ದಾರೆ. ಅವರ ಈ ಪ್ರತಿಕ್ರಿಯೆ, ದೇಶದಲ್ಲಿ ಸ್ಟಾರ್‌ಲಿಂಕ್ ಇಂಟರ್ನೆಟ್ ಸೇವೆ ಒದಗಿಸಲು ಅಗತ್ಯವಾದ ಎಲ್ಲ ತಯಾರಿ ಸದ್ದಿಲ್ಲದೇ ನಡೆಯುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಸಾಮಾನ್ಯ ಇಂಟರ್ನೆಟ್ ಸೇವೆ ಒದಗಿಸುವ ಟೆಲಿಕಾಂ ಕಂಪನಿಗಳು ತಲುಪದ ಕುಗ್ರಾಮ, ಕಾಡು ಅಥವಾ ಇನ್ನಿತರ ದುರ್ಗಮ ಪ್ರದೇಶಗಳಲ್ಲಿ ಉಪಗ್ರಹಗಳ ಗುಚ್ಛದ ಮೂಲಕವೇ ಅಂತರಿಕ್ಷದಿಂದ ಅತಿವೇಗದ ಇಂಟರ್ನೆಟ್ ಸಂಪರ್ಕ ಕಲ್ಪಿಸುವುದೇ 'ಸ್ಟಾರ್ ಲಿಂಕ್'ನ ವಿಶೇಷತೆ. ಈಗಾಗಲೇ ಅಮೆರಿಕ ಸೇರಿದಂತೆ ಮುಂತಾದೆಡೆ 'ಸ್ಟಾರ್ ಲಿಂಕ್' ತನ್ನ ಸೇವೆಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿದೆ. ಇದಕ್ಕಾಗಿ ಮೊದಲ ತಲೆಮಾರಿನ ವ್ಯವಸ್ಥೆಯನ್ನೊಳಗೊಂಡಂತೆ 2019ರಿಂದ ಇಲ್ಲಿಯವರೆಗೆ 'ಸ್ಪೇಸ್‌ಎಕ್ಸ್' ಬರೋಬ್ಬರಿ 1740 ಸ್ಟಾರ್‌ಲಿಂಕ್ ಸ್ಯಾಟಲೈಟ್‌ಗಳನ್ನು ಉಡಾಯಿಸಿದೆ. ಸೆಕೆಂಡ್ ತಲೆಮಾರಿನ ವವಸ್ಥೆಯನ್ನು ಒಳಗೊಂಡ ಸುಮಾರು 30,000 ಸ್ಯಾಟಲೈಟ್‌ಗಳನ್ನು ನಭಕ್ಕೆ ಚಿಮ್ಮಿಸುವ ಯೋಜನೆಯನ್ನೂ ಎಲಾನ್ ಮಸ್ಕ್ ಹೊಂದಿದ್ದಾರೆ.

ಹೈಸ್ಪೀಡ್ ಸ್ಟಾರ್‌ಲಿಂಕ್ ಇಂಟರ್ನೆಟ್ ಸೇವೆಯು ಅತ್ಯಂತ ದುಬಾರಿಯೂ ಹೌದು. ಅಮೆರಿಕದಲ್ಲಿ ಈ ಸೇವೆ ಪಡೆಯಲು 499 ಡಾಲರ್ (ಸುಮಾರು 36000 ರೂ.) ನಿಗದಿಪಡಿಸಿದೆ. ವೈಫೈ ರೂಟರ್‌ನಿಂದ ಆರಂಭಿಸಿ ವಿದ್ಯುತ್ ಸಂಪರ್ಕದವರೆಗೆ ಎಲ್ಲವನ್ನೂ ಕಂಪನಿಯೇ ಒದಗಿಸುತ್ತದೆ. ನಂತರ ಪ್ರತಿ ತಿಂಗಳು ಗ್ರಾಹಕರು ಇಂಟರ್ನೆಟ್‌ಗೆ 99 ಡಾಲರ್ (ಸುಮಾರು 7000 ರೂ.) ಪಾವತಿಸಬೇಕಿದೆ. ಭಾರತದ ಮಟ್ಟಿಗೆ ಈ ಮೊತ್ತವು ದುಬಾರಿಯೇ ಆಗಿದೆ.

ವಿಶ್ವದ ಅಗ್ರಸ್ಥಾನದಲ್ಲಿರುವ ವಿದ್ಯುತ್ ಚಾಲಿತ ಟೆಸ್ಲಾ ಕಾರು ತಯಾರಿಕ ಕಂಪನಿಯನ್ನು ಸ್ಥಾಪಿಸುವ ಮೂಲಕ 'ತಂತ್ರಜ್ಞಾನ ಯಾರೊಬ್ಬರ ಸ್ವತ್ತಲ್ಲ' ಅನ್ನೋದನ್ನು ಎಲಾನ್ ಮಸ್ಕ್ ನಿರೂಪಿಸಿದ್ದಾರೆ. ಅದರ ಜೊತೆಗೆ 'ಸ್ಪೇಸ್‌ಎಕ್ಸ್' ಎಂಬ ಖಾಸಗಿ ಬಾಹ್ಯಾಕಾಶ ಸಂಸ್ಥೆಯನ್ನು ಸ್ಥಾಪಿಸಿ ಯಶಸ್ವಿಯಾಗುವ ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ. ಭಾರತದಲ್ಲಿ, ಅದರಲ್ಲೂ ಬೆಂಗಳೂರಿನಲ್ಲೇ ಟೆಸ್ಲಾ ಕಾರುಗಳ ಮಾರಾಟಕ್ಕೆ ಎಲ್ಲ ರೀತಿಯ ಸಿದ್ಧತೆ ನಡೆಸಿರುವುದು ವಿಶೇಷ ಎನ್ನಬಹುದು. ■


ನಿರಂತರ ಸದೃಢ ಆರೋಗ್ಯಕ್ಕಾಗಿ

SDM™ AYURVEDA PHARMACY

ಅಷ್ಟವರ್ಗಯುಕ್ತ

ಚ್ಯವನಪ್ರಾಶ ಲೇಹ

ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.

- ರೋಗ ನಿರೋಧಕ ಶಕ್ತಿ ಹೆಚ್ಚಿಸಲು
- ವೃದ್ಧಾಪ್ಯದ ಆರೋಗ್ಯ ಸಮಸ್ಯೆ
- ಮಕ್ಕಳ ಬೆಳವಣಿಗೆ

SDM

ಆಯುಷ್ ಕ್ವಾಥ

ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ

- ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
- ಶರೀರದ ಚಯಾಪಚಯ ಪ್ರಕ್ರಿಯೆ ಸುಧಾರಣೆ.
- ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.

ತಯಾರಕರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ

SDM

ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ISO 9001:2015 & GMP CERTIFIED

Email: sdmaph@sdmayurvedacollegeudupi.in

Customer Care: +91 8970977513

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.